ಓ ಎಸ್ ನಂ. 5/2015
ಪಿ ಡಬ್ಲ್ಯೂ: 2
ದಿನಾಂಕ 06-04-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 2 ಮತ್ತು 6ನೇ ಪ್ರತಿವಾದಿ ಪರ: ಶ್ರೀ ಬಿ ಆರ್ ವಕೀಲರಿಂದ:

ನಿಪಿ-55 ರ ಪ್ರಕಾರ 992-93 ರಲ್ಲಿ ವಿಭಾಗದ ಪ್ರಕಾರ ದಾವಾ ಐಟಂ ನಂ.5 ರ ಆಸ್ತಿಯಲ್ಲಿ ಹಕ್ಕು ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ತಿಮ್ಮಪ್ಪ. ನನ್ನ ತಂದೆಯನ್ನು ಸಹ ವಿಭಾಗದಲ್ಲಿ ಸೇರಿಸಿಕೊಂಡು ತೋರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮರಣ ಹೊಂದಿ ಸುಮಾರು 25 ವರ್ಷಗಳಾಗಿರುತ್ತವೆ. ನಿಪಿ-55 ರ ದಾಖಲೆಯನ್ನು ನಾನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ನಿಜ. ಸಾಕ್ಷಿಯು ನಾವು ಒಟ್ಟಿಗೆ ಇದ್ದೇವು ಎಂದು ನುಡಿದಿರುತ್ತಾರೆ. ಖಾತೆ ಬದಲಾಣೆಯಾಗಿರುವುದಕ್ಕೆ ಸಂಬಂದಪಟ್ಟಂತೆ ಖಾತೆ ಮಾಡಿರುವುದು ಸರಿ ಇಲ್ಲವೆಂದು ನಾನಾಗಲಿ ನನ್ನ ತಂದೆಯಾಗಲಿ ಎಲ್ಲಿಯೂ ಪ್ರಶ್ನಿಸಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನನಗೆ ಗೊತ್ತಿರಲಿಲ್ಲ ನನಗೆ ತಿಳಿದ ನಂತರ ಕೇಳಿದ್ದಕ್ಕೆ ಜಗಳವಾಗಿರುತ್ತದೆ ಆದ ಕಾರಣ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದು ನುಡಿದಿರುತ್ತಾರೆ.

ನಾನು ಸುಮಾರು 10 ಆಸ್ತಿಗಳ ಮೇಲೆ ಕೇಸನ್ನು ಹಾಕಿರುತ್ತೇನೆ. ಸರ್ವೆ ನಂ.177 ರ ಆಸ್ತಿಯು ಹುಲ್ಲೇಹಳ್ಳಿ ಗ್ರಾಮಕ್ಕೆ ಸೇರಿರುತ್ತದೆ. ಸರ್ವೆ ನಂ.177 ರ ಪಹಣಿ ಓಬಳಪ್ಪನವರ ಹೆಸರಿನಲ್ಲಿದೆ. ಓಬಳಪ್ಪನವರ ಹೆಸರಿಗೆ ಯಾವ ಆಧಾರದ ಮೇಲೆ ಖಾತೆ ಬಂದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು

ನುಡಿದಿರುತ್ತಾರೆ ಮತ್ತು ನನ್ನ ಅಜ್ಜನಿಂದ ಓಬಳಪ್ಪನಿಗ ಬಂದಿರುತ್ತದೆ ಎಂದು ನುಡಿದಿರುತ್ತಾರೆ.

ನನ್ನ ಅಜ್ಜನಿಂದ ಓಬಳಪ್ಪನ ಹೆಸರಿಗೆ ಖಾತೆ ಬಂದಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ನಾನು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಅಂತಹ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಿಂದಿನ ಪಹಣಿಗಳನ್ನು ಹಾಜರುಪಡಿಸಿಲ್ಲ ಚಾಲ್ತಿಯಲ್ಲಿರುವ ಪಹಣಿಯನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂ.177 ರ ಆಸ್ತಿ ನನ್ನ ಅಜ್ಜನ ಹೆಸರಿನಲ್ಲಿದ್ದ ಬಗ್ಗೆ ಪಹಣಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ.9/4 ಹುಲ್ಲೇಹಳ್ಳಿ ಗ್ರಾಮಕ್ಕೆ ಸೇರಿದ್ದಾಗಿರುತ್ತದೆ. ಸರ್ವೆ ನಂ.9/4 ರ ಪಹಣಿಯು ಈಗ ಗೋವಿಂದಪ್ಪನವರ ಹೆಸರಿನಲ್ಲಿದೆ. ಮೊದಲು ಸಗುನಪ್ಪನವರ ಹೆಸರಿನಲ್ಲಿತ್ತು. ಸಾಕ್ಷಿ ಮುಂದುವರೆದು ಸರ್ವೆ ನಂ.9/4 ನನ್ನ ಚಿಕ್ಕಪ್ಪನಾದ ಸಗುನಪ್ಪನ ಹೆಸರಿನಲ್ಲಿದ್ದು ನಂತರ ಗೋವಿಂದಪ್ಪ ಖರೀದಿಸಿರುವುದಾಗಿ ಖಾತೆ ಮಾಡಿಕೊಂಡಿರುತ್ತಾರೆ, ಅದರ ವಿರುದ್ದ ಎ ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಖಾತೆ ವಜಾವಾಗಿರುತ್ತದೆ, ನಂತರ ಅವರು ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಖಾತೆ ವಜಾವಾಗಿರುವುದನ್ನು ತೋರಿಸಲು ಎಸಿ ನ್ಯಾಯಾಲಯದ ಆದೇಶವನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂ.9/4 ರ ಆಸ್ತಿ ಮೂಲತಃ ನನ್ನ ಅಜ್ಜನಿಗೆ ಸೇರಿದ್ದಾಗಿದೆ. ಸರ್ವೆ ನಂ.9/4 ರ ಆಸ್ತಿಯು ಸಗುನಪ್ಪನಿಗೆ ದಾನದ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನು ಸಗುನಪ್ಪನ ಹೆಸರಿನಲ್ಲಿ ಖಾತೆ ಇತ್ತು ಎಂದರೆ ನಿಜ. ಸಗುನಪ್ಪನಿಗೆ ವಿಭಾಗದ ಮೂಲಕ ಬಂದಿದೆ ಎಂದರೆ ಸರಿಯಲ್ಲ. ಸಗುನಪ್ಪ ಮರಣ ಹೊಂದಿದ ನಂತರ ಸಗುನಿರಂಗಪ್ಪನ

ಹೆಸರಿಗೆ ಸದರಿ ಆಸ್ತಿಯ ಖಾತೆ ಬಂದಿರುತ್ತದೆ ಎಂದರೆ ಸಾಕ್ಷಿಯು ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

ಸಗುನಿರಂಗಪ್ಪನ ಸರ್ವೆ ನಂ.9/4 ರ ಆಸ್ತಿಯನ್ನು ಕ್ರಯಪತ್ರದ ಮೂಲಕ 6 ನೇ ಪ್ರತಿವಾದಿಗೆ 2001 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಏನು ಗೊತ್ತಿಲ್ಲ ಎಂದು ನುಡಿದಿರುತ್ತಾರೆ.ಸರ್ವೆ ನಂ.9/4 ರ ಪಹಣಿ ತಿಮ್ಮಮ್ಮನವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಆಧಾರ ಮಾಡಿ ಬ್ಯಾಂಕಿನಲ್ಲಿ ಸಾಲ ಪಡೆದಿದ್ದಾರೆ ಎಂದರೆ ಇರಬಹುದು.

ದಾವಾ ಐಟಂ ನಂ.3 ಸರ್ವೆ ನಂ.9/7 ರ ಆಸ್ತಿಯು ಒಟ್ಟು 1.28 ಗುಂಟೆ ವಿಸ್ತೀರ್ಣ ಇದೆ. ಸದರಿ ಜಮೀನು ಹುಲ್ಲೇಹಳ್ಳಿ ಗ್ರಾಮಕ್ಕೆ ಸೇರಿದ್ದಾಗಿದೆ. ಓಬಳಪ್ಪ, ಸತ್ತಪ್ಪ, ತಿಮ್ಮಪ್ಪ ಮತ್ತು ಗೋವಿಂದಪ್ಪ ನನ್ನ ಅಜ್ಜನ ನಾಲ್ಕು ಜನ ಮಕ್ಕಳು ಎಂದರೆ ನಿಜ. ಸರ್ವೆ ನಂ.9/7 ರಲ್ಲಿ ಓಬಳಪ್ಪನಿಗೆ 27 ಗುಂಟೆ, ತಿಮ್ಮಪ್ಪನಿಗೆ 27 ಗುಂಟೆ, ಸಗುನಪ್ಪನಿಗೆ 27 ಗುಂಟೆ, ಗೋವಿಂದಪ್ಪನಿಗೆ 26 ಗುಂಟೆ ಜಮೀನು ಎಂ ಆರ್ ನಂ.11/92-93 ರಂತೆ ವಿಭಾಗದ ಮೂಲಕ ಬಂದಿದೆ ಎಂದರೆ ಸರಿಯಲ್ಲ.

ಸರ್ವೆ ನಂ.162 ರ ಹುಲ್ಲೇಹಳ್ಳಿ ಗ್ರಾಮಕ್ಕೆ ಸೇರಿದ್ದಾಗಿದೆ. ಅದರ ವಿಸ್ತೀರ್ಣ ಎರಡು ಎಕರೆಗಿಂತ ಹೆಚ್ಚಿರಬಹುದು. ಸರ್ವೆ ನಂ.162 ರ ಜಮೀನಿನ ಖಾತೆ ಸತ್ತಪ್ಪನ 4 ಜನ ಮಕ್ಕಳ ಹೆಸರಿಗಿದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಅವರ ಇಷ್ಟ ಬಂದಂತೆ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸರ್ವೆ ನಂ.162 ರಲ್ಲಿ ಓಬಳಪ್ಪನಿಗೆ 27 ಗುಂಟೆ, ತಿಮ್ಮಪ್ಪನಿಗೆ 27 ಗುಂಟೆ, ಸಗುನಪ್ಪನಿಗೆ 27 ಗುಂಟೆ, ಗೋವಿಂದಪ್ಪನಿಗೆ 28 ಗುಂಟೆ ಜಮೀನು ಬಂದಿದೆ ಎಂದರೆ ನಿಜ.

ದಾವಾ ಐಟಂ ನಂ.6 ಸರ್ವೆ ನಂ.4/25 ರ ಜಮೀನು ಬೀರೂರು-ಕಾವಲು ಗ್ರಾಮಕ್ಕೆ ಸೇರಿದ್ದಾಗಿದೆ. ಸದರಿ ಆಸ್ತಿಯು ಬೀರೂರು-ಕಾವಲು ಗ್ರಾಮದ್ದು ಎಂದು ನನ್ನ ದಾವಾ ಪತ್ರದಲ್ಲಿ ಹೇಳಿರುತ್ತೇನೆ. ಆ ರೀತಿ ನಾನು ಬರೆಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.4/25 ರ ಜಮೀನು ಹುಲ್ಲೇಹಳ್ಳಿ ಗ್ರಾಮಕ್ಕೆ ಸೇರಿದ್ದು ಎಂದು ನನ್ನ ದಾವಾ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಮ್ಮ ಜಮೀನು ಆದ್ದರಿಂದ ಹುಲ್ಲೇಹಳ್ಳಿ ಜಮೀನು ಎಂದು ಹೇಳಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಸರ್ವೆ ನಂ.4/25 ರ ಜಮೀನಿನ ಪಹಣಿಯನ್ನು ಹಾಜರುಪಡಿಸಿರುತ್ತೇನೆ. ಅಂತಹ ಯಾವುದೇ ಪಹಣಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.7 ಸರ್ವೆ ನಂ.4/20 ರ ಆಸ್ತಿಯು ಬೀರೂರು-ಕಾವಾಲು ಗ್ರಾಮದಾಗಿರುತ್ತದೆ. ಆ ರೀತಿ ನನ್ನ ವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ಹುಲ್ಲೇಹಳ್ಳಿ ಗ್ರಾಮ ಎಂದು ಬರೆಸಿರುತ್ತೇನೆ ಎಂದರೆ ನಿಜ. ದಾವಾ ಐಟಂ ನಂ.6 ಮತ್ತು 7 ರ ಆಸ್ತಿಗಳು ಬೀರೂರು-ಕಾವಲು ಎಂದು ಬರೆಸಿಲ್ಲ ಹುಲ್ಲೇಹಳ್ಳಿ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.4/20 ರ ಪಹಣಿಯನ್ನು ಹಾಜರುಪಡಿಸಿರುತ್ತೇನೆ. ಅಂತಹ ಯಾವುದೇ ಪಹಣಿಯನ್ನು ನಾನು ಹಾಜರುಪಡಿಸಿದೆ ಇದ್ದರೂ ಹಾಜರುಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ.9/5 ಒಟ್ಟು 1 ಎಕರೆ 30 ಗುಂಟೆ ವಿಸ್ತೀರ್ಣ ಇದೆ. ಸದರಿ ಜಮೀನು ಹುಲ್ಲೇಹಳ್ಳಿ ಗ್ರಾಮದಾಗಿದ್ದು, ಪಹಣಿ ಗೋವಿಂದಪ್ಪನವರ ಹೆಸರಿನಲ್ಲಿರುತ್ತದೆ. ಗೋವಿಂದಪ್ಪನಿಗೆ ಯಾವ ಆಧಾರದ ಮೇಲೆ ಖಾತೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದನ್ನುಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದು ನುಡಿದಿರುತ್ತಾರೆ.

ಸದರಿ ಆಸ್ತಿಯನ್ನು 1996 ರಲ್ಲಿ ಕೆಂಚಪ್ಪನವರಿಂದ 2 ಲಕ್ಷ ರೂಗಳಿಗೆ ಖರೀದಿಸಲಾಗಿದೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.